**ಸಿ.ಸಿ.ನಂ.: 223/2023**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **13-01-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಶ್ರೀ. B.D.S. ವಕೀಲರಿಂದ**

1. ಸಾಕ್ಷಿಗೆ ನಿ.ಪಿ.8 ನ್ನು ತೋರಿಸಲಾಗಿ, ಪ್ರದ್ರಿ ದಾಖಲಾತಿಯು ಯಾವುದು ಎಂದು ಕೇಳಿದರೆ ಪ್ರದ್ರಿ ದಾಖಲಾತಿಯು ಯಾವುದು ಎಂದು ನನಗೆ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ9 ನ್ನು ತೋರಿಸಲಾಗಿ ಪ್ರದ್ರಿ ದಾಖಲಾತಿಯು ತನ್ನ ತೆಂಗಿನ ಕಾಯಿಯ ವ್ಯಾಪಾರಕ್ಕೆ ಸಂಬಂಧಿಸಿದ ದಾಖಲೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಪ್ರದ್ರಿ ದಾಖಲಾತಿಯನ್ನು ನಾನು ತೊರ್ಕೆ ಗ್ರಾಮ ಪಂಚಾಯತಿಯಿಂದ ಪಡೆದುಕೊಂಡಿರುತ್ತೇನೆ. ಪ್ರದ್ರಿ ದಾಖಲಾಯನ್ನು ನಾನು ಯಾವ ದಿನಾಂಕದಂದು ಹಾಗೂ ಯಾವ ವರ್ಷದಂದು ಪಡೆದುಕೊಂಡಿರುತ್ತೇನೆ ಎಂದು ನನಗೆ ನೆನಪಿಗೆ ಬರುತ್ತಿಲ್ಲ.

2. ನಿಪಿ 11 ತೋರಿಸಲಾಗಿ ಪ್ರದ್ರಿ ದಾಖಲಾತಿಯು ತನ್ನ ತೆಂಗಿನ ಕಾಯಿಯ ವ್ಯಾಪಾರಕ್ಕೆ ಸಂಬಂಧಿಸಿದ ದಾಖಲೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಪ್ರದ್ರಿ ದಾಖಲಾತಿಯನ್ನು ನಾನು ತೊರ್ಕೆ ಗ್ರಾಮ ಪಂಚಾಯತಿಯಿಂದ ಪಡೆದುಕೊಂಡಿರುತ್ತೇನೆ. ಪ್ರದ್ರಿ ದಾಖಲಾಯನ್ನು ನಾನು ಯಾವ ದಿನಾಂಕದಂದು ಹಾಗೂ ಯಾವ ವರ್ಷದಂದು ಪಡೆದುಕೊಂಡಿರುತ್ತೇನೆ ಎಂದು ನನಗೆ ನೆನಪಿಗೆ ಬರುತ್ತಿಲ್ಲ.

3. ಈ ಪ್ರಕರಣದ ವ್ಯವಹಾರ ನಡೆದಿದೆ ಎನ್ನಲಾದ ಸಮಯದಲ್ಲಿ ನಾನು 5-6 ವರ್ಷಗಳಿಂದ ತೆಂಗಿನ ಕಾಯಿಯ ವ್ಯಾಪಾರವನ್ನು ಮಾಡುತ್ತಿದ್ದೇನು. ನಾನು ಪ್ರಸ್ತುತ ಕೂಡ ತೆಂಗಿನ ಕಾಯಿಯ

ವ್ಯಾಪಾರವನ್ನು ಮಾಡುತ್ತಿದ್ದೇನೆ. ತೆಂಗಿನ ಕಾಯಿಯ ವ್ಯಾಪಾರ ಎನ್ನುವುದು ಕೃಷಿ ಉತ್ಪನ್ನದ ಅಡಿಯಲ್ಲಿ ಬರುತ್ತದೆ ಎಂದರೆ ಸರಿ. ಕೃಷಿ ಉತ್ಪನ್ನವನ್ನು ಮಾರಾಟ ಮಾಡುವರರು ಎಪಿಎಮ್‌ಸಿ ಯಿಂದ ಪರವಾನಿಗೆ ಯನ್ನು ಹೊಂದಬೇಕು ಎಂದರೆ ಸಾಕ್ಷಿಯು ನಾವು ಗ್ರಾಮ ಪಂಚಾಯತಿಯಲ್ಲಿ ವಾಸ್ತವ್ಯದಲ್ಲಿ ಇದ್ದು ನಾವು ಅಲ್ಲಿಂದ ಪರವಾನಿಗೆ ಯನ್ನು ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಕೃಷಿ ಉತ್ಪನ್ನವನ್ನು ಮಾರಾಟ ಮಾಡುವವವರು ಕಡ್ಡಾಯವಾಗಿ ಎಪಿಎಮ್‌ಸಿಯಿಂದ ಪರವಾನಿಗೆಯನ್ನು ತೆಗೆದುಕೊಳ್ಳಬೇಕು ಎಂದರೆ ಸಾಕ್ಷಿಯು ಈ ಬಗ್ಗೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ.

4. ನಾನು ಗ್ರಾಮ ಪಂಚಾಯತ್ ತೊರ್ಕೆ ಯಿಂದ ತೆಂಗಿನ ಕಾಯಿ ವ್ಯಾಪಾರ ಮಾಡುವ ಕುರಿತಾಗಿ No objection ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದಿಲ್ಲ. ನಾವು ತೆಂಗಿನ ಕಾಯಿಯನ್ನು ಮಾರಾಟ ಮಾಡಿದ 24 ಗಂಟೆಗಳ ಒಳಗಾಗಿ ಎಪಿಎಮ್‌ಸಿಗೆ ಎಷ್ಟು ತೆಂಗಿನ ಕಾಯಿ ಮಾರಾಟ ಮಾಡಿದ್ದೇವೆ ಎಂಬ ಬಗ್ಗೆ ಶುಲ್ಕವನ್ನು ಭರಣ ಮಾಡಬೇಕು ಎಂಬ ಬಗ್ಗೆ ನನಗೆ ತಿಳಿದಿಲ್ಲ. ನನಗೆ ತೆಂಗಿನ ಕಾಯಿಯ ವ್ಯಾಪಾರಕ್ಕೆ ಸಂಬಂಧಿಸಿದಂತೆ ಅಂಗಡಿಯ ಪರವಾನಿಗೆ ಇರುವುದಿಲ್ಲ. ಸಾಕ್ಷಿಯು ಮುಂದುವರಿದು ನಾನು ಮನೆಯಲ್ಲಿ ಮಾರಾಟ ಮಾಡುತ್ತೇನೆ ಎಂದು ನುಡಿಯುತ್ತಾರೆ. ತೆಂಗಿನ ಕಾಯಿಯು ಮಾರಾಟವಾಗದೇ ಉಳಿದ ಬಗ್ಗೆ ನನ್ನ ಬಳಿ ಯಾವುದೇ ಸ್ಟಾಕ್ ರಸೀದಿ ಇರುವುದಿಲ್ಲ.

5. ನಮ್ಮ ಮನೆಯಲ್ಲಿ ಬೆಳೆದ ತೆಂಗಿನ ಕಾಯಿಗಳನ್ನು ಮಾತ್ರ ನಾನು ಮಾರಾಟ ಮಾಡುತ್ತೇವೆ. ನನ್ನ ಮನೆಯಲ್ಲಿ 15 ತೆಂಗಿನ ಮರಗಳು ಇವೆ. ಅಂದಾಜು ನಮ್ಮ ಮನೆಯ ತೆಂಗಿನ ಮರಗಳಲ್ಲಿ ಅಂದಾಜು

800 ರಿಂದ 1000 ದಷ್ಟು ಕಾಯಿಗಳಾಗುತ್ತವೆ. ಇವುಗಳನ್ನು ಹೊರತುಪಡಿಸಿ ನಾನು ಬೇರೆಯವರಿಂದ ತೆಂಗಿನ ಕಾಯಿಯನ್ನು ಖರೀದಿ ಮಾಡುವುದಿಲ್ಲ. ಸದ್ರಿ ತೆಂಗಿನ ಮರಗಳು ಇರುವ ಜಾಗವು ನನ್ನ ಹೆಸರಿನಲ್ಲಿ ಇದೆ. ಸದ್ರಿ ಜಾಗವು ನನ್ನ ಹೆಸರಿನಲ್ಲಿ ಇದೆ ಎಂಬ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ತೆಂಗಿನ ಕಾಯಿಯನ್ನು ಮಾರಾಟ ಮಾಡಿದ ಕುರಿತಾಗಿ ಯಾವುದೇ ಬಿಲ್ಲುಗಳು ನನ್ನ ಬಳಿ ಇರುವುದಿಲ್ಲ. ತೆಂಗಿನ ಕಾಯಿಯನ್ನು ತೆಗೆದುಕೊಂಡು ಹೋದವರು ನನಗೆ Google Pay, Phone pay ಯ ಮುಖಾಂತರ ಹಣವನ್ನು ನನಗೆ ಸಂದಾಯ ಮಾಡುತ್ತಿದ್ದರು.

**6.** ನಾನು I.C.I.C.I Bank, Saint Milagres ಹಾಗೂ Canara Bank ಹಾಗೂ Safe Star ಗಳಲ್ಲಿ ನಾನು ಸಾಲದ ಖಾತೆಯನ್ನು ಹೊಂದಿದ್ದೇನೆ ಎಂದರೆ ಸಾಕ್ಷಿಯು ಕೆನರಾ ಬ್ಯಾಂಕನ್ನು ಹೊರತುಪಡಿಸಿ ಉಳಿದ ಬ್ಯಾಂಕಿನಲ್ಲಿ ಸಾಲದ ಖಾತೆಯನ್ನು ಹೊಂದಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 7 ರಿಂದ 10 ರಲ್ಲಿ ನಾನು ಕೈಗಡ ಸಾಲವನ್ನು ನೀಡಿದ ಕುತಾಗಿ ನಮೂದು ಇಲ್ಲ ಎಂದರೆ ಸಾಕ್ಷಿಯು ನಾನು ಹೇಳಿರುತ್ತೇನೆ. ಅವರು ಏನು ನಮೂದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ 7 ರಿಂದ 10 ಸರಿಯಾದ ದಾಖಲಾತಿಯಾಗಿರುತ್ತದೆ. ನಿಪಿ 7 ರಿಂದ 10 ರಲ್ಲಿ ನಾನು ಆರೋಪಿತಳಿಗೆ ಹಣವನ್ನು ನೀಡಿದ್ದೇನೆ ಎಂಬ ಬಗ್ಗೆ ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಅವರ ಬಳಿ ಹೇಳಿದ್ದು, ಅವರು ಒಟ್ಟಾಗಿ ನಮೂದಿಸುತ್ತೇನೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

**7.** ನಿಪಿ 12 ರಲ್ಲಿ ದಿನಾಂಕಃ 04/06/2015 ರಂದು ರೂಪಾಯಿ 22 ಲಕ್ಷ ನನ್ನ ಖಾತೆಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ಖಾತೆಗೆ ಯಾವುದೇ ಹಣ ಬಂದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ನನ್ನ ಅತ್ತೆಯವರ ಹೆಸರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 12 ನನಗೆ ಸಂಬಂಧಿಸಿದ ದಾಖಲಾತಿ ಅಲ್ಲ ಎಂದರೆ ಸಾಕ್ಷಿಯು ಅದು ನನ್ನ ಅತ್ತೆಯವರಿಗೆ ಸಂಬಂಧಿಸಿದ್ದು ನಂತರ ನನ್ನ ಮನೆಯವರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದ್ರಿ ದಾಖಲಾತಿಯಲ್ಲಿ ದಿನಾಂಕಃ 06/06/2015 ರಿಂದ 23/06/2015 ರವರೆಗೆ ರೂ. 21 ಲಕ್ಷಕ್ಕಿಂತ ಹೆಚ್ಚಿಗೆ ಹಣವನ್ನು ಖರ್ಚು ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ನನ್ನ ಅತ್ತೆಯು ನನ್ನ ಮನೆಯವರಿಗೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅತ್ತೆಯು ನನ್ನ ಗಂಡನಿಗೆ ಹಣ ನೀಡಿದ ಕುರಿತಾಗಿ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

**8.** ನಾನು ತೆಂಗಿನ ಕಾಯಿ ವ್ಯಾಪಾರವನ್ನು ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ 7 ರಿಂದ 12 ನ್ನು ನಾನು ನನಗೆ ಆದಾಯ ಇದೆ ಎಂದು ತೋರಿಸಲು ಸುಳ್ಳಾಗಿ ಸೃಷ್ಟಿಸಿದ ದಾಖಲಾತಿಗಳು ಎಂದರೆ ಸರಿಯಲ್ಲ. ನನಗೆ ಯಾವುದೇ ಆದಾಯ ಅಥವಾ ನಾನು ಯಾವುದೇ ಆದಾಯದ ಮೂಲವನ್ನು ಹೊಂದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

ಹೆ.ಪ್ರ.ದ.ನ್ಯಾ.ದಂ. ಕುಮಟಾ